# ನಗರಸಭಾ ಕಾರ್ಯಾಲಯ, ಹರಿಹರ.

ಫೋನ್: 08192-244266, ಸಹಾಯವಾಣಿ: 08192- 242030, ಫ್ಯಾಕ್ಸ್: 08192-241024,
Website: www.hariharcity.gov.in

ನಂ:ನಸಹ/ನಿನ/ಜಿ.ಐ.ಎಸ್-4/2006-07 ದಿನಾಂಕ: 12/03/2007

## ಕೊಟೇಷನ್‌ಗಳ ಆಹ್ವಾನ (ತುರ್ತು)

**ವಿಷಯ:** ನಮೂನೆ ಸಿ ಗಳ ಪ್ರಿಂಟ್‌ಗಳನ್ನು ಎ4 ಸೈಜಿನ ಕಾಗದದಲ್ಲಿ ಲೇಜರ್ ಪ್ರಿಂಟಿಂಗ್ ತೆಗೆದುಕೊಡುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಡಾಟಾ ಎಂಟ್ರಿ ಮಾಡಲಾಗಿರುವ ನಮೂನೆ ಸಿ ಗಳ ಪ್ರಿಂಟ್‌ಗಳನ್ನು ನಾಗರೀಕರಿಗೆ ಹಂಚಲು ಎ4 ಗಾತ್ರದ ಕಾಗದಲ್ಲಿ ಪ್ರಿಂಟ್ ತೆಗೆದುಕೊಡಲು ಆಸಕ್ತಿಯುಳ್ಳ ಏಜನ್ಸಿಗಳಿಂದ ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಏಜನ್ಸಿಗಳು ದಿನಾಂಕ:14/03/2007ರೊಳಗೆ ಪೌರಾಯುಕ್ತರು ನಗರಸಭೆ, ಹರಿಹರ ಇವರಿಗೆ ಸಲ್ಲುವಂತೆ ಒದಗಿಸಲು ಕೋರಿದೆ. ಪ್ರಿಂಟ್‌ಗೆ ಬೇಕಾದ ಪಿ.ಡಿ.ಎಫ್. ಫೈಲುಗಳನ್ನು ಕಛೇರಿ ಒದಗಿಸುವುದು, ಕಂಪ್ಯೂಟರ್, ಪ್ರಿಂಟರ್, ಕಾಗದವನ್ನು ಏಜನ್ಸಿಗಳೇ ಅಳವಡಿಸಿಕೊಳ್ಳುವುದು ಮತ್ತು ತುರ್ತಾಗಿ ಕಾರ್ಯ ನಿರ್ವಹಿಸುವುದು.

ಸಹಿ/-
ಪೌರಾಯುಕ್ತರು,
ನಗರಸಭೆ, ಹರಿಹರ.

ಪ್ರತಿಯನ್ನು:

1) ವೆಬ್‌ಸೈಟಿನಲ್ಲಿ ಪ್ರಕಟಿಸಲು
2) ಸೂಚನಾ ಫಲಕಕ್ಕೆ
3) ಕಡತಕ್ಕೆ.

ನಾಗರೀಕರ ಆಸ್ತಿ ಪರಿಶೀಲನೆಗಾಗಿ ಕರಡು ನಮೂನೆಯ ಮುಖ ಪತ್ರ

# ನಗರಸಭಾ ಕಾರ್ಯಾಲಯ, ಹರಿಹರ.

ಫೋನ್: 08192-244266, ಸಹಾಯವಾಣಿ: 08192- 242030, ಫ್ಯಾಕ್ಸ್: 08192-241024, website:www.hariharcity.gov.in

ದಿನಾಂಕ: ಪತ್ರ ಸಂಖ್ಯೆ:

ಇವರಿಗೆ,
ಶ್ರೀ/ಶ್ರೀಮತಿ_______________
______________________
______________________

ಮಾನ್ಯರೇ,

**ವಿಷಯ:- ಆಸ್ತಿ ವಿವರಗಳನ್ನು ಖಚಿತಪಡಿಸಿಕೊಳ್ಳುವ ಬಗ್ಗೆ**

ನಾಗರೀಕರೊಂದಿಗೆ ಉತ್ತಮ ಭಾಂಧವ್ಯ ಮತ್ತು ಪಾರದರ್ಶಕ ಆಡಳಿತ ನಡೆಸುವ ದೃಷ್ಟಿಯಿಂದ ಹರಿಹರ ನಗರಸಭೆಯು ಆಸ್ತಿ ತೆರಿಗೆ ಲೆಕ್ಕ ಹಾಗೂ ವಸೂಲಿಗಳನ್ನು ಗಣಕೀಕೃತಗೊಳಿಸುತ್ತಿದೆ ಎಂಬ ಅಂಶವನ್ನು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಗಣಕೀಕೃತಗೊಳಿಸುವ ನಿಟ್ಟಿನಲ್ಲಿ ಮೊದಲ ಹಂತವಾಗಿ ನಿಮ್ಮ ಆಸ್ತಿ ವಿವರಗಳನ್ನು ಫೀಲ್ಡ್ ಸರ್ವೇ ಮಾಡಿ Form " C " ನಲ್ಲಿ ನಮೂದಿಸಿರುವುದನ್ನು ಈ ಪತ್ರದ ಜೊತೆ ಲಗತ್ತಿಸಲಾಗಿದೆ. Form " C " ನಲ್ಲಿ ನಮೂದಿಸಲಾಗಿರುವ ನಿಮ್ಮ ಆಸ್ತಿಯ ವಿವರಗಳನ್ನು ಪರಿಶೀಲಿಸಿ, ದಾಖಲು ಮಾಡಿರುವ ಎಲ್ಲ ಮಾಹಿತಿಗಳು ಸರಿಯಿರುವ ಬಗ್ಗೆ ಖಚಿತಪಡಿಸಿಕೊಂಡು Form " C " ಯ ಕೆಳ ಭಾಗದಲ್ಲಿ ಎಲ್ಲ ಮಾಹಿತಿಗಳು ಸರಿ ಇರುವ ಬಗ್ಗೆ ಸಹಿ ಮಾಡಿ ಮೂಲ ಪ್ರತಿಯನ್ನು ನಗರಸಭೆಗೆ ಹಿಂದಿರುಗಿಸುವಂತೆ ತಿಳಿಸಿದೆ.

ಈ ನೋಟೀಸಿನ ಹಿಂದೆ ತಿಳಿಸಿರುವ 8 ವರ್ಗಿಕರಣ ಕೋಷ್ಠಕದಲ್ಲಿ ಸೂಚಿಸಿರುವಂತೆ, ಕಟ್ಟಡ ನಿರ್ಮಾಣದ ರೀತಿ ಹಾಗೂ ಮೌಲೀಕರಣ ವರ್ಗದನ್ವಯ, ನಿಮ್ಮ ಆಸ್ತಿಯನ್ನು ವರ್ಗೀಕರಿಸಲಾಗಿದೆ. (ನಿಮಗೆ ಕೊಟ್ಟಿರುವ ಪ್ರತಿಯಲ್ಲಿ ಕಲಂ 6 ನ್ನು ನೋಡಿಕೊಳ್ಳುವುದು)

ಒಂದು ವೇಳೆ Form " C " ನಲ್ಲಿ ನಮೂದಿಸಿರುವ ಯಾವುದೇ ಮಾಹಿತಿಯನ್ನು ನೀವು ಒಪ್ಪದೇ ಇದ್ದ ಪಕ್ಷದಲ್ಲಿ, ಸರಿಯಾದ ಮಾಹಿತಿಯನ್ನು ನಿಮ್ಮ ಪ್ರಕಾರ ತಪ್ಪು ಮಾಹಿತಿ ಪಕ್ಕದಲ್ಲಿ ಕೈಯಿಂದ ಸರಿ ಮಾಹಿತಿ ನಮುದಿಸಿ, Form 'C' ಯ ಕೆಳಭಾಗದಲ್ಲಿ ನೀವು ಸರಿ ಮಾಡಿರುವ ಕಾಲಂಗಳನ್ನು ಟಿಕ್ ಹಾಕಿ ಸಹಿ ಮಾಡಿ, ತಿದ್ದುಪಡಿ ಮಾಡಿರುವ ಮೂಲ ಪ್ರತಿಯನ್ನು ಹರಿಹರ ನಗರಸಭೆಗೆ ಹಿಂದಿರುಗಿಸತಕ್ಕದ್ದು.

ಸಹಿ ಮಾಡಿದ Form " C " ಗಳನ್ನು ಈ ಪತ್ರ ತಲುಪಿದ 15 ದಿನದೊಳಗಾಗಿ ಹರಿಹರ ನಗರಸಭೆಗೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ 15 ದಿನದೊಳಗಾಗಿ ನಿಮ್ಮಿಂದ ಯಾವುದೇ ಉತ್ತರ ಸ್ವೀಕೃತವಾಗದೇ ಇದ್ದ ಪಕ್ಷದಲ್ಲಿ Form 'C' ಯಲ್ಲಿ ನಮೂದಿಸಿರುವ ಎಲ್ಲ ಮಾಹಿತಿಗಳು ಸರಿಯಾಗಿದೆ ಅದಕ್ಕೆ ನಿಮ್ಮ ಆಕ್ಷೇಪಣೆ ಏನು ಇರುವುದಿಲ್ಲ ಎಂದು ಭಾವಿಸಲಾಗುವುದು.

Form " C " ನಲ್ಲಿ ನೀಡಿರುವ ನಿಮ್ಮ ಆಸ್ತಿ ಗುರುತಿನ ಸಂಖ್ಯೆಯನ್ನು ಇನ್ನು ಮುಂದೆ ನಿಮ್ಮ ಆಸ್ತಿ ಗುರುತಿಸಲು ಉಪಯೋಗಿಸಲಾಗುವುದು. ಆದಕಾರಣ ಈಗ ನೀಡಿರುವ ಆಸ್ತಿ ಸಂಖ್ಯೆಯನ್ನು ನಿಮ್ಮ ಆಸ್ತಿಗೆ ಸಂಬಂಧಿಸಿದ ಮುಂದಿನ ಎಲ್ಲ ವ್ಯವಹಾರಗಳಲ್ಲೂ ಉಲ್ಲೇಖಿಸುವಂತೆ ತಿಳಿಸಿದೆ.

ಆಸ್ತಿ ತೆರಿಗೆಯ ನಿಖರವಾದ ಲೆಕ್ಕವನ್ನು ನಿರ್ವಹಣೆ ಮಾಡುವ ಸಂಬಂಧದಲ್ಲಿ ಹರಿಹರ ನಗರಸಭೆಯು ನಿಮ್ಮ ಪೂರ್ಣ ಸಹಕಾರವನ್ನು ಕೋರಲಾಗಿದೆ.

ವಂದನೆಗಳೊಂದಿಗೆ,

ಪೌರಾಯುಕ್ತರು
ನಗರಸಭೆ, ಹರಿಹರ.

ಗಮನಿಸಿ

ಫಾರಂ ‘ಸಿ’ ನಲ್ಲಿನ ಕಲಂ 6 ರಲ್ಲಿ ವರ್ಗೀಕರಿಸಿರುವ ಮೌಲೀಕರಣ ವರ್ಗವು ಕೆಳಕಂಡ ಕೋಷ್ಠಕದಂತಿರುತ್ತದೆ.

| ಮೌಲೀ ಕರಣ ವರ್ಗ | ಕಟ್ಟಡ ನಿರ್ಮಾಣದ ಸ್ವರೂಪ | ನೆಲ ಮಹಡಿ ಹಾಗೂ ಕಟ್ಟಡದ ಎಲ್ಲಾ ಮಹಡಿಗಳಿಗೆ ರೂ. ಪ್ರತಿ ಚ.ಅಡಿಗೆ (2002–03ರಿಂದ 2004–05ರವರೆಗೆ) ನಿಗದಿತವಾದ ಧರ | ನೆಲ ಮಹಡಿ ಹಾಗೂ ಕಟ್ಟಡದ ಎಲ್ಲಾ ಮಹಡಿಗಳಿಗೆ ರೂ. ಪ್ರತಿ ಚ.ಅಡಿಗೆ (2005–06ನೇ ಸಾಲಿನಿಂದ) ನಿಗದಿತವಾದ ಧರ |
|---|---|---|---|
| 1 | ಆರ್.ಸಿ.ಸಿ. ಮಾಜಾಕ್ ಫ್ಲೋರಿಂಗ್ ತೇಗ, ಹೊನ್ನಿ ಮರ ಅಥವಾ ಇದಕ್ಕೆ ಸಮಾನ ರೀತಿಯ ಕಟ್ಟಡ ನಿರ್ಮಾಣ. | 360 | 225 |
| 2 | ಆರ್.ಸಿ.ಸಿ. ಮನೆ ನಂದಿ ಹೊನ್ನೆ ಮರ ಅಥವಾ ಇದಕ್ಕೆ ಸಮಾನವಾದ ಕಟ್ಟಡ ನಿರ್ಮಾಣ, ಕಬ್ಬಿಣ ಕಿಟಕಿಗಳು, | 325 | 175 |
| 3 | ಮದ್ರಾಸ್ ತಾರಿಸಿ, ಕಾಡು ಜಾತಿ ಮರ ಅಥವಾ ಇದಕ್ಕೆ ಸಮಾನ ರೀತಿಯ ಕಟ್ಟಡ ನಿರ್ಮಾಣ. | 295 | 138 |
| 4 | ಸಿಮೆಂಟ್ ಶೀಟ್, ಜಿಂಗ್ ಶೀಟ್, ರೆಡ್ ಆಕ್ಸೈಡ್ ಫ್ಲೋರಿಂಗ್, ಕಾಡು ಜಾತಿ ಮರ ಅಥವಾ ಇದಕ್ಕೆ ಸಮಾನ ರೀತಿಯ ಕಟ್ಟಡ ನಿರ್ಮಾಣ. | 230 | 110 |
| 5 | ಮಂಗಳೂರು ಹಂಚು, ಮಣ್ಣಿನ ಗೋಡೆ, ಸಿಮೆಂಟ್ ಗಿಲಾವು, ಅಥವಾ ಇದಕ್ಕೆ ಸಮಾನ ರೀತಿಯ ಕಟ್ಟಡ ನಿರ್ಮಾಣ. | 230 | 110 |
| 6 | ಕರಿ ಹಂಚು, ಮಣ್ಣಿನ ಗೋಡೆ ಅಥವಾ ಇದಕ್ಕೆ ಸಮಾನ ರೀತಿಯ ಕಟ್ಟಡ ನಿರ್ಮಾಣ. | 165 | 88 |
| 7 | ಗುಡಿಸಲು ಮಣ್ಣಿನ ಗೋಡೆ, ನೆರಿಕೆ ಗೋಡೆ ಅಥವಾ ಇದಕ್ಕೆ ಸಮಾನ ರೀತಿಯ ಕಟ್ಟಡ ನಿರ್ಮಾಣ. | 75 | 50 |
| 8 | ಹುಲ್ಲು ಮನೆ/ಶುದ್ದ ಮಾಳಿಗೆ ಮನೆ, ನೆರಿಕೆ ಗೋಡೆ, ಹುಲ್ಲು ಹೊದಿಕೆ ಅಥವಾ ಇದಕ್ಕೆ ಸಮಾನ ರೀತಿಯ ಕಟ್ಟಡ ನಿರ್ಮಾಣ. | 100 | 75 |

* ನಿವೇಶನದ ಅಂದಾಜು ಮಾರುಕಟ್ಟೆ ದರವನ್ನು ಕ.ಮು. ಅಧಿನಿಯಮ ಪ್ರಕರಣ 45ಬಿ ಅನ್ವಯ ಆಯಾ ಪ್ರದೇಶಕ್ಕೆ ನಿಗದಿಯಾದ ದರದಂತೆ ನಿರ್ಧರಿಸಲಾಗಿದೆ.

**<u>ದೂರುಗಳನ್ನು ದಾಖಲಿಸಲು: (ದಿನದ 24 ಗಂಟೆಯೂ ದೂರು ದಾಖಲಿಸುವ ಸೌಲಭ್ಯವಿರುತ್ತದೆ).</u>**

1) ಸಹಾಯವಾಣಿ ಸಂಖ್ಯೆ:08192–242030 ಅಥವಾ ಕಛೇರಿಯಲ್ಲಿ ದೊರೆಯುವ ಅರ್ಜಿಗಳನ್ನು ಉಪಯೋಗಿಸಿ.
2) Website:www.hariharcity.gov.in/grievance-redressal.html
3) ನಿಮ್ಮ ದೂರಿನ ಬಗ್ಗೆ ತಿಳಿಯಲು ದೂರು ನೊಂದಣಿ ಸಂಖ್ಯೆಯನ್ನು ಉಪಯೋಗಿಸಿ.
4) ಕಸ ನಿರ್ವಹಣೆ ಮತ್ತು ವಿಲೇವಾರಿ ಬೀದಿ ದೀಪ ನಿರ್ವಹಣೆ ಮತ್ತು ಇನ್ನಿತರ ದೂರುಗಳನ್ನು ಸಹಾಯವಾಣಿಯಲ್ಲಿ ದಾಖಲಿಸಬಹುದು.
5) ಬೀದಿ ದೀಪಗಳ ದೂರನ್ನು ನೊಂದಾಯಿಸುವಾಗ ಕಂಬದ ಮೇಲಿರುವ ಸಂಖ್ಯೆಯನ್ನು ತಪ್ಪದೆ ನಮೂದಿಸಿ.
6) ಮಳೆಹಾನಿ ಮತ್ತು ಪ್ರವಾಹ ಸಂದರ್ಭಗಳಲ್ಲಿ ಸಾರ್ವಜನಿಕರು ನಗರಸಭೆಯ ಸಹಾಯವಾಣಿಯನ್ನು ಸಂಪರ್ಕಿಸುವುದು.

********

- ತಪ್ಪದೆ ಆಸ್ತಿ ತೆರಿಗೆ ಮತ್ತು ನೀರಿನ ಕಂದಾಯ ಕಡ್ಡಾಯವಾಗಿ ಪಾವತಿಸಿ.
- ಜನನ ಮತ್ತು ಮರಣ ನೋಂದಾಣಿಯನ್ನು ಕಡ್ಡಾಯವಾಗಿ ನೊಂದಾಯಿಸಿ.
- ಮನೆಮನೆ ಕಸ ಸಂಗ್ರಹಣೆಗೆ ಸಹಕರಿಸಿ ಮತ್ತು ತಪ್ಪದೆ ಸೇವಾ ಶುಲ್ಕ ಪಾವತಿ ಮಾಡಿ.
- ನಿಮ್ಮ ನಗರವನ್ನು ಸ್ವಚ್ಛ ಹಾಗೂ ಸುಂದರವಾಗಿರಿಸಲು ಸಹಕರಿಸಿ.
- ಕುಡಿಯುವ ನೀರನ್ನು ಮಿತವಾಗಿ ಬಳಸಿ.